ಮಾನ್ಯ ಜಮಖಂಡಿ ಶಾಸಕರ ಕೋರಿಕೆಯ ಮೇರಗೆ ಈ ಹಿಂದೆ ದಿ 9 5 2005ರಿಂದ ಜಮಖಂಡಿಗೆ ಹೊಸ ರಾಜಹಂಸ ಸಾರಿಗೆಯನ್ನು ವಿಶೇಷ ಪ್ರೋತ್ಸಾಹಕ ಪ್ರಯಾಣ ದರದ ಅಡಿಯಲ್ಲಿ ಪ್ರಾರಂಬಿಸಲಾಯಿತು, ಆದರೆ ಸದರಿ ಸಾರಿಗೆಯಿಂದ ನಿರೀಕ್ಷಿತ ಆದಾಯ ಸಂದಾಯವಾಗದೆ ಇರುವುದರಿಂದ ನಷ್ಟ ಉಂಟಾಗುವುದನ್ನು ಗಮನಿಸಿ ದಿ 13 9 2005ರಿಂದ ಈ ಮಾರ್ಗವನ್ನು ರದ್ದು ಪಡಿಸಲಾಯಿತು ಕಾರಣ ನಿರೀಕ್ಷಿತ ಆದಾಯ ಬಾರದೆ ಇರುವ ಹಿನ್ನಲೆಯಲ್ಲಿ ವೊಲ್ವೋ ಸಾರಿಗೆಯನ್ನು ಪ್ರಾರಂಬಿಸಲಾಗಿರುವುದಿಲ್ಲ

ಏ) ಎಂದಿನಿಂದ ಓಲ್ವೋ ಬಸ್ ಪ್ರಾರಂಭಿಸಲಾಗುವುದು?

ಈ ಸಾಲಿನ ಮೇ ತಿಂಗಳ ಕೊನೆಯ ವಾರದಿಂದ ಜಮಖಂಡಿಯಿಂದ ಬೆಂಗಳೂರಿಗೆ ಹೊಸ ಎ ಸಿ ಮೇಘದೂತ ಸಾರಿಗೆಯನ್ನು ಪ್ರಾರಂಭಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1168(1525)
ಮಾನ್ಯ ಸದಸ್ಯರ ಹೆಸರು ಶ್ರೀ ಸಿದ್ದು ಸಾವದಿ (ಜಮಖಂಡಿ)
ಉತ್ತರಿಸುವ ಸಚಿವರು ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಜಮಖಂಡಿ ಮಧ್ಯಭಾಗದಲ್ಲಿರುವ ಬಿಜಾಪೂರ–ಲೋಕಾಪೂರ ರಾಜ್ಯ ಹೆದ್ದಾರಿಯನ್ನು ಯಾವ ಅನುದಾನದಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಇದು ಎಷ್ಟು ಕಿಲೋಮೀಟರ್ ಇದೆ,

ಈ ರಸ್ತೆಯನ್ನು ವಿಶ್ವಬ್ಯಾಂಕಿನ ಸಾಲ (4606)ದ ನೆರವಿನ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ (ಈ ರಸ್ತೆಯು 55 63 ಕಿಮೀ ಇರುತ್ತದೆ)

ಆ) ಜಮಖಂಡಿ ನಗರದ ಮಧ್ಯ ಭಾಗದಲ್ಲಿ ಹಾಯ್ದುಹೋಗುವ ಈ ರಸ್ತೆಗೆ ಡ್ರೈನೇಜ್ ಮಾಡಲಾಗುವುದೇ,

ಸುಮಾರು 310ಮೀ ಉದ್ದದ ಡ್ರೈನೇಜ್ ಮಾಡಲಾಗುವುದು

ಇ) ಹಾಗಿದ್ದಲ್ಲಿ ಇದನ್ನು ಎಸ್ಟಿಮೇಟಿನಲ್ಲಿ ಸೇರಿಸದಿರಲು ಕಾರಣಗಳೇನು,

ಅನ್ವಯಿಸುವುದಿಲ್ಲ

ಈ) ಇದರ ಟೆಂಡರ್ ಅವಧಿ ಎಷ್ಟು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಇದರ ಟೆಂಡರ್ ಅವಧಿಯು 30 ತಿಂಗಳಾಗಿದ್ದು, ಕಾಮಗಾರಿಯನ್ನು 30–06–2007ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ